‘ಕಲರ್ಸ್ ಕನ್ನಡ’ದ ಬ್ರ್ಯಾಂಡ್

# ಶಾಂತಂ ಪಾಪಂ

## –ಕಣ್ತೆರೆಸೋ ಕಥೆಗಳು

- ದಕ್ಷಿಣ ಭಾರತದ ಏಕೈಕ ಕ್ರೈಂ ಶೋ
- ಕಲರ್ಸ್ ಕನ್ನಡದ ಬ್ರ್ಯಾಂಡ್ ‘ಶಾಂತಂ ಪಾಪಂ’
- ಸೋಮವಾರ–ಶನಿವಾರ: ವಾರದ 6 ದಿನ
- ಮಧ್ಯಾಹ್ನ 3.00 ಗಂಟೆಗೆ ಪ್ರಸಾರ
- ಒಂದು ಗಂಟೆ ಅವಧಿಯ ಧಾರಾವಾಹಿ



ಅಪರಾಧ ಜಗತ್ತಿನ ನೈಜ ಘಟನೆಗಳ ಬಗ್ಗೆ ಅರಿವು ಮೂಡಿಸುತ್ತಾ ಬಂದಿರುವ ‘ಶಾಂತಂ ಪಾಪಂ’ ಧಾರಾವಾಹಿ ‘ಕಲರ್ಸ್ ಕನ್ನಡ’ ವಾಹಿನಿಯಲ್ಲಿ ನಿಮ್ಮ ಮನೆ, ಮನಗಳನ್ನು ತಲುಪುತ್ತಾ ದಾಪುಗಾಲು ಇಟ್ಟಿದೆ. ಕಿರುತೆರೆಯ ಇತಿಹಾಸದಲ್ಲಿ ದೀರ್ಘಕಾಲ ಪ್ರೇಕ್ಷಕ ವರ್ಗವನ್ನು ಹಿಡಿದಿಟ್ಟುಕೊಂಡು ಸಾಮಾಜಿಕ ಸಂದೇಶಗಳನ್ನು ಸಾರುತ್ತಿರುವ ಶಾಂತಂ ಪಾಪಂ ನಾಲ್ಕು ಸೀಸನ್‌ಗಳನ್ನು ಯಶಸ್ವಿಯಾಗಿ ಪೂರೈಸಿ ಈಗ 5ನೇ ಸೀಸನ್‌ನ ಎಪಿಸೋಡ್‌ಗಳನ್ನು ಪ್ರಸಾರ ಮಾಡುತ್ತಿದೆ. ಒಂದು ಗಂಟೆ ಅವಧಿಯಲ್ಲಿ ಹೇಳಿದ ಪಾಪದ ಕಥೆಗಳು ನೂರಾರು, ಕಲಿಸಿದ ಪಾಠಗಳು ಸಾವಿರಾರು.

ಫೆಬ್ರವರಿ 2017ರಲ್ಲಿ ‘ಕಲರ್ಸ್ ಸೂಪರ್ ಚಾನೆಲ್’ನಿಂದ ಆರಂಭವಾದ ‘ಶಾಂತಂ ಪಾಪಂ’ ಧಾರಾವಾಹಿ ಸೀಸನ್ ಪಯಣ ಈಗ 5ನೇ ಸೀಸನ್‌ಗೆ ಬಂದು ತಲುಪಿದೆ. ಅಂದು ಕಲರ್ಸ್ ಸೂಪರ್‌ನಲ್ಲಿ ಶುರುವಾದದ್ದು, 2023ರಲ್ಲಿ ‘ಕಲರ್ಸ್ ಕನ್ನಡ’ ವಾಹಿನಿ ಮೂಲಕ ಮುಂದುವರಿದಿದೆ. ಪ್ರಸ್ತುತ 5ನೇ ಸೀಸನ್‌ನ ಶಾಂತಂ ಪಾಪಂ ಧಾರಾವಾಹಿ ಮತ್ತಷ್ಟು ರೋಚಕ ಹಾಗೂ ನೈಜ ಘಟನೆಗಳತ್ತ ಬೆಳಕು ಚೆಲ್ಲಿವೆ. ಕಥೆಗಳು ಸಮಾಜದಲ್ಲಿ ದಿನನಿತ್ಯ ನಡೆಯುವ ಅಪರಾಧದ ಘಟನೆಗಳಿಗೆ ಹತ್ತಿರವಾಗಿವೆ.

ಸತತ 7 ವರ್ಷಗಳಿಂದ ಸುದೀರ್ಘವಾಗಿ ಮೂಡಿಬರುತ್ತಿರುವ ಶಾಂತಂ ಪಾಪಂ ಎಪಿಸೋಡ್‌ಗಳಲ್ಲಿ 600ಕ್ಕೂ ಹೆಚ್ಚು ಕಥೆಗಳು ಪ್ರೇಕ್ಷಕರನ್ನು ಸರಿದಾರಿಗೆ ತರುವ ಪ್ರಯತ್ನ ಮಾಡುತ್ತಲಿವೆ. ದಕ್ಷಿಣ ಭಾರತದ ಏಕೈಕ ಅಪರಾಧ ಕಥೆಗಳ ಸ್ಫೂರ್ತಿ ಆಧಾರಿತ ಧಾರಾವಾಹಿ ಇದಾಗಿದ್ದು, ಇಂತಹ ಪ್ರಯತ್ನ ಇದುವರೆಗೂ ದಕ್ಷಿಣ ಭಾರತದ ಯಾವ ಭಾಷೆಯಲ್ಲಾಗಲಿ ಅಥವಾ ಯಾವುದೇ ವಾಹಿನಿಯಲ್ಲಾಗಲಿ ಆಗಿಲ್ಲ ಎಂಬುದು ವಿಶೇಷ.

**ಪ್ರಸ್ತುತಿ: ಸುಧಾ ಬ್ರ್ಯಾಂಡ್ ಸ್ಪಾಟ್**

ಕನ್ನಡ ಸೇರಿದಂತೆ ಇತರ ಭಾಷೆಗಳಲ್ಲಿ ಸಾಮಾಜಿಕ ಧಾರಾವಾಹಿಗಳು ಹಲವು ವರ್ಷಗಳಿಂದ ಮೂಡಿಬಂದಿರಬಹುದು. ಆದರೆ, ನೈಜ ಕ್ರೈಂ ಘಟನೆಗಳನ್ನು ಕಥೆಗಳ ರೂಪದಲ್ಲಿ ಶಾಂತಂ ಪಾಪಂ ಧಾರಾವಾಹಿಯಲ್ಲಿ ತರಲಾಗಿದೆ. ಆದರೆ, ಆ ಪಾಪದ ಜಗತ್ತನ್ನು ವೈಭವೀಕರಿಸದೇ ಅವತರಣಿಕೆಯನ್ನು ಅನಾವರಣಗೊಳಿಸುತ್ತಿರುವುದು ಶಾಂತಂ ಪಾಪಂನ ವಿಶೇಷ. ಆದ್ದರಿಂದಲೇ ಈ ಧಾರಾವಾಹಿ ‘ಕಲರ್ಸ್ ಕನ್ನಡದ ಬ್ರ್ಯಾಂಡ್’ ಎಂತಲೇ ಗುರುತಿಸಲಾಗಿದೆ.

ಪ್ರೇಕ್ಷಕರನ್ನು ಆಯಸ್ಕಾಂತದಂತೆ ಹಿಡಿದಿಡುವ ಮೂಲಕ ಅತ್ಯಂತ ಜನಪ್ರಿಯ ಧಾರಾವಾಹಿಯಾಗಿ ಬೆಳೆದಿರುವ ಶಾಂತಂ ಪಾಪಂಗೆ ಕನ್ನಡದ 50ಕ್ಕೂ ಅಧಿಕ ಬರಹಗಾರರು, ಕಥೆಗಾರರು ದುಡಿದಿದ್ದಾರೆ. ಈ ಕಾರ್ಯಕ್ರಮದ ಚಿತ್ರಕಥೆ, ಸಂಭಾಷಣೆ ಅತ್ಯುತ್ತಮವಾಗಿ ಮೂಡಿಬರಲು ಶ್ರಮಿಸಿದ್ದಾರೆ. ‘ಲೇಖನಿ ಕತ್ತಿಗಿಂತ ಹರಿತ’ ಎಂಬುದು ಅದೆಷ್ಟು ಹರಿತ ಅಂತ ಬರಹಗಾರರ ಬುದ್ಧಿಮತ್ತೆಗೆ ಚುರುಕು ಕೊಟ್ಟಿದ್ದು ಕೂಡ ಈ ಶಾಂತಂ ಪಾಪಂ ಧಾರಾವಾಹಿ ಕಥೆಗಳೇ. ಅಕ್ಷರ ಕಾಣಿಕೆ ನೀಡುತ್ತಿರುವ ಕಥೆಗಾರರು, ಬರಹಗಾರರು ಇದರ ಜತೆಗಿರುವುದು ಧಾರಾವಾಹಿ ಘನತೆ ಹೆಚ್ಚಿಸಲು ಕಾರಣ. ಬಿಗ್‌ಬಾಸ್ ಮತ್ತು ಇತರ ರಿಯಾಲಿಟಿ ಶೋಗಳು ಪ್ರೇಕ್ಷಕರನ್ನು ಹೇಗೆ ತನ್ನತ್ತ ಸೆಳೆಯುತ್ತವೆಯೋ ಅದೇ ರೀತಿ ಶಾಂತಂ ಪಾಪಂ ಕೂಡ ಸೂಜಿಗಲ್ಲಾಗಿದೆ.

ಕಥೆಗಳನ್ನು ಹೇಳಿದ ಆ್ಯಂಕರ್‌ಗಳು ನೂರಾರಾದರೆ, ಕರಾವಳಿ, ಮಲೆನಾಡು, ಬಯಲುಸೀಮೆ ಸೇರಿದಂತೆ ಕರ್ನಾಟಕದ ಉದ್ದಗಲಕ್ಕೂ ಹೋಗಿ ಚಿತ್ರೀಕರಿಸಿದ ಸಂಚಿಕೆಗಳು ತಲುಪಿದ್ದು ಲಕ್ಷಾಂತರ ಜನ–ಮನ. ಇನ್ನೂ ಸಾಮಾಜಿಕ ಜಾಲತಾಣಗಳಲ್ಲಿ ಶಾಂತಂ ಪಾಪಂ ಸೃಷ್ಟಿಸಿದ ಹವಾ ಅದ್ಭುತ..!

**ಸಮಾಜದ ಕಣ್ತೆರೆಸುವ ಕಥೆಗಳು:**

ಶಾಂತಂ ಪಾಪಂನಲ್ಲಿ ಮೂಡಿಬಂದ ಕಥೆಗಳು ಕೇವಲ ಅಪರಾಧಗಳು ಮಾತ್ರವಲ್ಲ. ನೊಂದವರಿದ್ದಾರೆ, ಮೋಸ ಹೋದವರಿದ್ದಾರೆ, ಗೆದ್ದವರಿದ್ದಾರೆ ಹಾಗೂ ಗೆಲ್ಲಿಸಿದವರಿದ್ದಾರೆ. ಧಾರಾವಾಹಿ ಮೂಲಕ ಅಪರಾಧ ಜಗತ್ತಿನ ಹಿಂದಿರುವ ಮನಸ್ಥಿತಿಗಳಿಂದ ಉಂಟಾಗುವ ಅವಘಡಗಳ ಬಗ್ಗೆ ಮನವರಿಕೆ ಮಾಡಿಕೊಡುವ ಕಾರ್ಯ ಆಗಿದೆ ಮತ್ತು ಆಗುತ್ತಿದೆ ಎಂಬುದಂತೂ ನಿಜ.

4ನೇ ಸೀಸನ್ ಕಥೆಗಳಲ್ಲಿ ನಾವು ಎಲ್ಲಿ ಎಡುವುತ್ತೇವೋ, ಎಲ್ಲಿ ತಪ್ಪುತ್ತೇವೋ ಎಂಬುದನ್ನು ಪ್ರತಿಬಿಂಬಿಸುವ ಹಾಗೂ ತಪ್ಪಿನ ಅರಿವಿನ ಪಾಠ ಕಲಿಸುವ ಕಥೆಗಳಾಗಿದ್ದವು. 5ನೇ ಸೀಸನ್ ಧಾರಾವಾಹಿ ಸಮಾಜದ ಕಣ್ತೆರೆಸುವ ಕಥೆಗಳಾಗಿವೆ. ಈ ಪಾಪದ ಕತೆಗಳು, ಪಾಠ ಕಲಿಸುವ ಕಥೆಗಳನ್ನಾಗಿಸಲಾಗಿದೆ.

ಶಾಂತಂ ಪಾಪಂ ಧಾರಾವಾಹಿಯ ಕಥಾವಸ್ತು ವಿಶಿಷ್ಟವಾಗಿರುತ್ತದೆ. ಅಂತಿಮ ಕ್ಷಣದವರೆಗೂ ಸಸ್ಪೆನ್ಸ್ ಕಾಯ್ದುಕೊಂಡು, ಮಾನವೀಯ ನೆಲೆಗಟ್ಟಿನಲ್ಲಿ ಅಪರಾಧಗಳನ್ನು ನೋಡುವಂತೆ ಮಾಡುವ ಪ್ರಯತ್ನ ಮಾಡುತ್ತಿದೆ. ಸಾಮಾಜಿಕ ಪಿಡುಗುಗಳ ಮೇಲೆ ಬೆಳಕು ಚೆಲ್ಲಿದೆ. ಆದ್ದರಿಂದಲೇ, ಈ ಕಾರ್ಯಕ್ರಮ ಕಲರ್ಸ್ ಕನ್ನಡದ ಅತ್ಯಂತ ಹೆಮ್ಮೆಯ ಶೋ ಎನಿಸಿದೆ.

**ನಟ, ನಟಿಯರಿಗೆ ಪ್ರಥಮ ವೇದಿಕೆ:**

ಕನ್ನಡ ಕಿರುತೆರೆಯ ಹಲವಾರು ನಟ, ನಟಿಯರಿಗೆ ಶಾಂತಂ ಪಾಪಂ ಪ್ರಥಮ ವೇದಿಕೆಯಾಗಿದೆ. ನಾಟಕರಂಗದ ಕಲಾವಿದರು ಇಲ್ಲಿನ ಪಾತ್ರಗಳಿಗೆ ಜೀವ ತುಂಬಿದ್ದಾರೆ. ಅಷ್ಟೇ ಅಲ್ಲದೆ, ಇದು ವಿಭಿನ್ನ ಧಾರಾವಾಹಿ ಸರಣಿ ಎಂದು ರುಜುವಾತುಪಡಿಸಿದ್ದಾರೆ. ಅಭಿನಯಿಸಿದ ನೂರಾರು ಪ್ರತಿಭೆಗಳು, ಕನ್ನಡದ ಇತರ ಚಾನೆಲ್‌ಗಳಲ್ಲಿ ಮತ್ತು ರಿಯಾಲಿಟಿ ಶೋಗಳಲ್ಲಿ ಮಿಂಚುತ್ತಿದ್ದಾರೆ. ಗಿಣಿರಾಮ ಖ್ಯಾತಿಯ ಮಹತಿ, ರಾಮಾಚಾರಿಯ ಚಾರು, ರಾಜ ರಾಣಿಯ ಓಂಕಾರ್ ಹೀಗೆ ಹತ್ತಾರು ಪ್ರತಿಭೆಗಳು ಪ್ರಪ್ರಥಮ ಬಾರಿಗೆ ಶಾಂತಂ ಪಾಪಂ ಮೂಲಕವೇ ಅವರ ಪ್ರತಿಭೆ ಅನಾವರಣಗೊಳಿಸಿದ್ದು ಹೌದು.